# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.584/2015/ಉನಿವಿ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:30.12.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯು:** ಕೆ.ಆರ್.ಪೇಟೆ ತಾಲ್ಲೂಕು, ಕಾಮನಹಳ್ಳಿ ಗ್ರಾಮದ ದೂರುದಾರರ ಮನೆಯ ಪಕ್ಕದಲ್ಲಿ 1ನೇ ಎದುರುದಾರರು ಅನಧಿಕೃತವಾಗಿ ನಿರ್ಮಿಸಿದ ಕಂಪೌಂಡ್ ತೆರವುಗೊಳಿಸಲು ಸೂಕ್ತ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀಮತಿ ನಾಗಮಣಿ, ಕಾಮನಹಳ್ಳಿ ಗ್ರಾಮದ ನಿವಾಸಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಶ್ರೀಕಂಠಾಚಾರಿ, ಖಾಸಗಿ ವ್ಯಕ್ತಿ, (2) ಕಾರ್ಯದರ್ಶಿ, ಬಳ್ಳಕೆರೆ ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮತ್ತು (3) ಅಧ್ಯಕ್ಷರು, ಬಳ್ಳಕೆರೆ ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ " 1ರಿಂದ 3ನೇ ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ದೂರಿನಲ್ಲಿ ಕೆ.ಆರ್.ಪೇಟೆ ತಾಲ್ಲೂಕು, ಕಾಮನಹಳ್ಳಿ ಗ್ರಾಮದ ಆಕೆಯ ವಾಸದ ಮನೆಯ ಪಕ್ಕದಲ್ಲಿ ಶ್ರೀಕಂಠಾಚಾರಿ(1ನೇ ಎದುರುದಾರರು) ಎನ್ನುವವರು 3 ಅಡಿ ರಸ್ತೆಯಲ್ಲಿ ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿರುತ್ತಾರೆ ಹಾಗೂ ವಿಧ್ಯುತ್ ಕಂಬವನ್ನು ಸಹ ಕಂಪೌಂಡ್ ಒಳಗೆ ಸೇರಿಸಿಕೊಂಡು ದೂರುದಾರರ ಮನೆಗೆ ದಾರಿಯಿಲ್ಲದಂತೆ ಮಾಡಿರುತ್ತಾರೆ. ಆದರೆ ಸದರಿ ರಸ್ತೆ ಸಾರ್ವಜನಿಕರು ತಿರುಗಾಡುವ ರಸ್ತೆಯಾಗಿರುತ್ತದೆ. ಆದ್ದರಿಂದ ಅಕ್ರಮವಾಗಿ ಕಟ್ಟಿರುವ ಕಂಪೌಂಡ್ ಗೋಡೆಯನ್ನು ತೆರವುಗೊಳಿಸಿ ಸಾರ್ವಜನಿಕರು ತಿರುಗಾಡಲು ಅವಕಾಶ ಮಾಡಿಕೊಡಬೇಕೆಂದು ಬಿಳಿಕೇರಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಾಗೂ ಗ್ರಾಮ

ಪಂಚಾಯತಿ ಅಧ್ಯಕ್ಷರಿಗೆ ದೂರು ನೀಡಿರುತ್ತಾರೆ. ಆದರೂ ಸದರಿಯವರು ಹಣದ ಬಲ ಹಾಗೂ ರಾಜಕೀಯ ಒತ್ತಡದಿಂದ ದೂರುದಾರರ ಮನವಿಯನ್ನು ಪರಿಗಣಿಸದೆ ಹಾಗೇ ಇದ್ದಾರೆ. ಈ ಬಗ್ಗೆ ದಿ.22.11.2014ರಂದು ಸರ್ಕಾರದ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಗೆ ಪತ್ರವ್ಯವಹಾರ ಮಾಡಿರುತ್ತಾರೆ. ಆದರೂ ಸಹ ದೂರುದಾರರ ತೊಂದರೆಯನ್ನು ಯಾವ ಅಧಿಕಾರಿಗಳೂ ಕ್ರಮಕೈಗೊಂಡಿರುವುದಿಲ್ಲ ಹಾಗೂ ದೂರುದಾರರ ಮನೆಗೆ ಹೋಗುವ ದಾರಿಯಲ್ಲಿ ಕಟ್ಟಿದ ಕಂಪೌಂಡ್ ಗೋಡೆಯನ್ನು ತೆರವುಗೊಳಿಸಿಲ್ಲ ಎಂದು ತಿಳಿಸಿರುತ್ತಾರೆ.

3. ಎದುರುದಾರರಾದ ಪಿಡಿಒ, ಬೆಳ್ಳಿಕೇರಿ ಗ್ರಾಮ ಪಂಚಾಯತ್, ಮತ್ತು ಅಧ್ಯಕ್ಷರು ಬೆಳ್ಳಿಕೇರಿ ಗ್ರಾಮ ಪಂಚಾಯತ್, ಇವರಿಗೆ ನೋಟೀಸ್ ನೀಡಿ ಆಕ್ಷೇಪಣೆಯನ್ನು ಕೋರಲಾಯಿತು. 2ನೇ ಎದುರುದಾರರು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳ್ಳಿಕೇರಿ ಗ್ರಾಮ ಪಂಚಾಯತ್, ಮತ್ತು 3ನೇ ಎದುರುದಾರರು ಅಧ್ಯಕ್ಷರು, ಬೆಳ್ಳಿಕೇರಿ ಗ್ರಾಮ ಪಂಚಾಯತ್, ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 2 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ದಿ.19.6.2014ರಂದು ನೀಡಿದ ದೂರಿನ ಮೇರೆಗೆ ಕಾಮನಹಳ್ಳಿ ಗ್ರಾಮದಲ್ಲಿ ಅಧ್ಯಕ್ಷರು, ಬೆಳ್ಳಿಕೇರಿ ಗ್ರಾಮ ಪಂಚಾಯತ್, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಬಾಜುದಾರರ ಗ್ರಾಮಸ್ಥರ ಸಮಕ್ಷಮದಲ್ಲಿ 17.7.2014ರಂದು ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಮಾಡಿ ಸ್ಥಳ ಪರಿಶೀಲನೆ ಮಾಡಿದ್ದಾರೆಂದು ತಿಳಿಸಿರುತ್ತಾರೆ. ಸದರಿಯವರು ತಮ್ಮ ಆಕ್ಷೇಪಣೆಗಳಲ್ಲಿ 1ನೇ ಎದುರುದಾರರು ಕಂಪೌಂಡ್ ನಿರ್ಮಿಸಿರುವುದು ಮತ್ತು ಸಾರ್ವಜನಿಕ ವಿಧ್ಯುತ್ ಕಂಭ 1ನೇ ಎದುರುದಾರರು ನಿರ್ಮಿಸಿದ ಕಂಪೌಂಡ್ ಒಳಗಡೆ ಬರುತ್ತದೆಂದು ತಿಳಿಸಿರುತ್ತಾರೆ. ಆದರೆ ಈ ಬಗ್ಗೆ ಗ್ರಾಮಸ್ಥರು ವಿಧ್ಯುತ್ ಕಂಭದಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸ್ಥಳ ಪರಿಶೀಲನೆ ಸಮಯದಲ್ಲಿ ದೂರುದಾರರು ಸಹ ಸ್ಥಳದಲ್ಲಿದ್ದು ಸ್ಥಳ ಪರಿಶೀಲನೆಗೆ ಸಹಿ ಮಾಡಿರುತ್ತಾರೆ. ದಿ.29.9.2015ರಂದು ಪಂಚಾಯತ್ ಸಾಮಾನ್ಯ ಸಭೆ ನಡೆಸಿ ದೂರುದಾರರು ನೀಡಿದ ವಿಚಾರವನ್ನು ಸಭೆಯಲ್ಲಿ ಚರ್ಚಿಸಿ ದೂರು

ನೀಡಿರುವ ಸಂಬಂಧವಾಗಿ ಸಾರ್ವಜನಿಕರಿಂದ ದೂರುಗಳು ಇಲ್ಲದಿರುವುದರಿಂದ ನಾಗಮಣಿ ದೂರುದಾರರೊಬ್ಬರೇ ವೈಯಕ್ತಿಕ ದ್ವೇಷದಿಂದ ದೂರು ನೀಡುತ್ತಿರುವುದು ಎಂದು ಸಭೆ ಗಮನಿಸಿ ದೂರಿನಿಂದ ಗ್ರಾಮದಲ್ಲಿ ಯಾವುದೇ ತೊಂದರೆ ಕಂಡುಬಂದಿರುವುದಿಲ್ಲವೆಂದು ಸರ್ವಾನುಮತದಿಂದ ತೀರ್ಮಾನವಾಯಿತೆಂದು ತಿಳಿಸಿರುತ್ತಾರೆ.

4. 2 ಮತ್ತು 3ನೇ ಎದುರುದಾರರು ರಸ್ತೆಯ ಅಗಲ ಎಷ್ಟಿದೆಯೆಂದು ಸ್ಪಷ್ಟವಾಗಿ ತಿಳಿಸಿರುವುದಿಲ್ಲ. ಕಾರಣ ಈ ಕಛೇರಿಯಿಂದ ಕಾರ್ಯ ನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತಿ, ಕೆ.ಆರ್.ಪೇಟೆ, ಇವರಿಗೆ ವಿದ್ಯುತ್ ಕಂಭದ ಸ್ಥಳದ ಬಗ್ಗೆ ವಿವರವಾದ ವರದಿ ನೀಡಲು ಕೇಳಿಕೊಳ್ಳಲಾಗಿತ್ತು. ದಿ.13.7.2017ರಂದು ಸದರಿಯವರು ಪತ್ರ ಬರೆದು ಸಾರ್ವಜನಿಕ ವಿದ್ಯುತ್ ಕಂಬ 1ನೇ ಎದುರುದಾರರು ನಿರ್ಮಿಸಿರುವ ಕಂಪೌಂಡ್ ಒಳಗಡೆ ಬರುತ್ತದೆ. ವಿದ್ಯುತ್ ಕಂಬದ ಸುತ್ತಲೂ ಬಂಡೆಯಿರುವುದರಿಂದ ಆ ಸಮಯದಲ್ಲಿ ವಿದ್ಯುತ್ ಕಂಭವನ್ನು 1ನೇ ಎದುರುದಾರರ ಜಾಗದಲ್ಲಿ ನೆಟ್ಟಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಸದರಿಯವರು ರಸ್ತೆಯ ಅಗಲ ಎಷ್ಟಿದೆಯೆಂದು ತಿಳಿಸಿರುವುದಿಲ್ಲ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ 2 ಮತ್ತು 3ನೇ ಎದುರುದಾರರು ಹಾಗೂ ಕಾರ್ಯನಿರ್ವಹಣಾಧಿಕಾರಿಗಳು, ಕೆ.ಆರ್.ಪೇಟೆ ಅವರು ಸಲ್ಲಿಸಿದ ಆಕ್ಷೇಪಣೆ ಮತ್ತು ವರದಿಯನ್ನು ಅಲ್ಲಗಳೆದು ಮತ್ತೆ ತಮ್ಮ ಪ್ರತ್ಯುತ್ತರದಲ್ಲಿ ಮುಂದುವರೆದು ಬೆಳ್ಳಿಕೇರಿ ಪಂಚಾಯತಿ ಪಿಡಿಒ ಪಂಚಾಯತ್ ರಾಜ್ ನಿಯಮಗಳನ್ನು ಉಲ್ಲಂಘಿಸಿ ಕಾಮನಹಳ್ಳಿಯಲ್ಲಿರುವ ಆಕೆಯ ಮನೆಯ ಮುಂದೆ ಎದುರುದಾರರು ಶೌಚಾಲಯ ಮತ್ತು ಕಟ್ಟಡವನ್ನು ಕಟ್ಟಲು ಅನುಮತಿ ನೀಡಿರುತ್ತಾರೆ.

6. ದೂರು, ಆಕ್ಷೇಪಣೆ ಪ್ರತ್ಯುತ್ತರ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ವರದಿಯಿಂದ ಸಾರ್ವಜನಿಕ ವಿಧ್ಯುತ್ ಕಂಭ 1ನೇ ಎದುರುದಾರರು ಕಟ್ಟಿರುವ ಕಂಪೌಂಡ್ ಗೋಡೆಯ ಒಳಗಡೆ ಬರುತ್ತದೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ವಿದ್ಯುತ್ ಇಲಾಖೆಯವರು ವಿದ್ಯುತ್ ಕಂಭಗಳನ್ನು ಸಾರ್ವಜನಿಕ ಜಾಗದಲ್ಲಿ ಮಾತ್ರ ನೆಡುತ್ತಾರೆ. ಒಂದು ವೇಳೆ ಖಾಸಗಿ ವ್ಯಕ್ತಿಯ ಜಾಗದಲ್ಲಿ ವಿದ್ಯುತ್ ಕಂಬವನ್ನು ನೆಟ್ಟಿದ್ದರೆ ವಿದ್ಯುತ್ ಇಲಾಖೆಯವರು ಸದರಿ ವ್ಯಕ್ತಿಯ ಅನುಮತಿ

ಪಡೆಯಬೇಕಾಗುತ್ತದೆ. ಆದರೆ ಆ ರೀತಿ ಅನುಮತಿ ನೀಡಿದ ಬಗ್ಗೆ ಎದುರುದಾರರು ತಿಳಿಸಿರುವುದಿಲ್ಲ. ವಿವಾದಿತ ವಿದ್ಯುತ್ ಕಂಬ ಒಂದನೇ ಎದುರುದಾರನ ಅಂದರೆ ಖಾಸಗಿ ವ್ಯಕ್ತಿಯ ಜಾಗದಲ್ಲಿದೆಯೆಂದು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 1ನೇ ಎದುರುದಾರ 3 ಅಡಿ ಸಾರ್ವಜನಿಕ ರಸ್ತೆಯನ್ನು ಅತಿಕ್ರಮಣ ಮಾಡಿ ಕಂಪೌಂಡ್ ಗೋಡೆಯನ್ನು ಕಟ್ಟಿಲ್ಲವೆಂದು ಸ್ಪಷ್ಟವಾಗಿ ತಿಳಿಸಿರುವುದಿಲ್ಲ. ಕಾರಣ 1ನೇ ಎದುರುದಾರನು ಕಂಪೌಂಡ ಗೋಡೆಯನ್ನು ಕಟ್ಟುವ ಸಮಯದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಡಿ.ಕೆ.ಕೃಷ್ಣಮೂರ್ತಿಯವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿಬಾಯಿಸಿರುವುದಿಲ್ಲ. ಸದರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಿದ್ದರೆ ಕಂಪೌಂಡ್ ಗೋಡೆ ವಿದ್ಯುತ್ ಕಂಬದ ಹೊರಗೆ ಬರುತ್ತಿರಲಿಲ್ಲ. 1ನೇ ಎದುರುದಾರ ಕಂಪೌಂಡ್ ಗೋಡೆಯನ್ನು ಸಾರ್ವಜನಿಕ ಓಡಾಡುವ ರಸ್ತೆಯಲ್ಲಿ ಅತಿಕ್ರಮಣ ಮಾಡಿ ಕಟ್ಟಿರುವುದು ಕಂಡುಬರುತ್ತದೆ. ಸದರಿ ಕೃತ್ಯ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಕೆ.ಆರ್.ಪೇಟೆ ತಾಲ್ಲೂಕು, ಕಾಮನಹಳ್ಳಿ ಗ್ರಾಮದಲ್ಲಿ 1ನೇ ಎದುರುದಾರರು ಅನಧಿಕೃತವಾಗಿ ಸಾರ್ವಜನಿಕ ರಸ್ತೆಯನ್ನು ಅತಿಕ್ರಮಿಸಿ ಕಟ್ಟಿದ ಕಂಪೌಂಡ್ ಗೋಡೆಯನ್ನು ತೆರವುಗೊಳಿಸಲು ಸಂಬಂಧಪಟ್ಟವರಿಗೆ ನಿರ್ದೇಶಿಸಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

30/12/17.

(ನ್ಯಾಯಮೂರ್ತಿ ಸುಭಾಷ್ ಬಿ.ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.